KACD420020092023

# ಹೊಳಲ್ಕೆರೆಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ

## ಸಿ.ಸಿ. ನಂಃ 1343/2023

ಫಿರ್ಯಾದಿದಾರರು : ಸರ್ಕಾರದ ಪರವಾಗಿ – ಚಿಕ್ಕಜಾಜೂರು ಪೋಲೀಸ್ ಠಾಣೆ

**–ವಿರುದ್ಧ–**

ಆರೋಪಿತರು : 1. ಬಸವರಾಜಪ್ಪ ಬಿನ್ ಲೇಟ್ ಚಂದ್ರಪ್ಪ ಮತ್ತು ಇತರರು.

**–:: ದೋ ಷಾ ರೋ ಪ ಣೆ ::–**

ಶ್ರೀ ಉಮೇಶ, ಎಂ.ಪಿ., ಬಿ.ಎ.ಎಲ್., ಎಲ್.ಎಲ್.ಬಿ. ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ., ಹೊಳಲ್ಕೆರೆ ಆದ ನಾನು

ಆರೋಪಿತರು : ಎ 1. ಬಸವರಾಜಪ್ಪ ಬಿನ್ ಲೇಟ್ ಚಂದ್ರಪ್ಪ
ವಯಸ್ಸುಃ 49 ವರ್ಷಗಳು, ವೃತ್ತಿಃ ವ್ಯವಸಾಯ,
ವಾಸಃ ಕಲ್ಲಪುರ ಗ್ರಾಮ, ಹೊಳೆಹೊನ್ನೂರು ಹೋಬಳಿ,
ಭದ್ರಾವತಿ ತಾಲ್ಲೂಕು , ಶಿವಮೊಗ್ಗ ಜಿಲ್ಲೆ .

ಎ 5. ಗಿರೀಶ ಬಿನ್ ವೀರಭದ್ರಪ್ಪ ,
ವಯಸ್ಸುಃ 38 ವರ್ಷಗಳು, ವೃತ್ತಿಃ ವ್ಯವಸಾಯ,
ವಾಸಃ ಬಿ.ದುರ್ಗ ಗ್ರಾಮ, ಹೊಳಲ್ಕೆರೆ ತಾಲ್ಲೂಕು,
ಚಿತ್ರದುರ್ಗ ಜಿಲ್ಲೆ.

ಎ 6. ವೀರಭದ್ರಪ್ಪ ಬಿನ್ ಚಂದ್ರಪ್ಪ ,
ವಯಸ್ಸುಃ 70 ವರ್ಷಗಳು, ವೃತ್ತಿಃ ವ್ಯವಸಾಯ,
ವಾಸಃ ಬಿ.ದುರ್ಗ ಗ್ರಾಮ, ಹೊಳಲ್ಕೆರೆ ತಾಲ್ಲೂಕು,
ಚಿತ್ರದುರ್ಗ ಜಿಲ್ಲೆ.

(**2, 3 ಮತ್ತು 4 ನೇ ಆರೋಪಿತರನ್ನು ದೋಷಾರೋಪಣಾ ಪಟ್ಟಿಯಿಂದ ಕೈ ಬಿಡಲಾಗಿರುತ್ತದೆ.**)

ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆ,

ದಿಃ 29-09-2023 ರಂದು ಬೆಳಗ್ಗೆ 9-10 ರ ಸಮಯದಲ್ಲಿ ಹೊಳಲ್ಕೆರೆ ತಾಲ್ಲೂಕು ಬಿ.ದುರ್ಗ ಗ್ರಾಮದಿಂದ ಗುಲಗಂಜಿಹಟ್ಟಿ ಗ್ರಾಮದ ಕಡೆಗೆ ಹೋಗುವ ರಸ್ತೆಯ ಪಕ್ಕದಲ್ಲಿರುವ ಸಾಸಲು ಗ್ರಾಮದ ರಿ, ಸರ್ವೆ ನಂಃ 62 ರಲ್ಲಿನ ಫಿರ್ಯಾದಿ ಮೋಹನ್ ಕುಮಾರ್ ಬಿನ್ ವೀರಭದ್ರಪ್ಪ ರವರ

ಭಾಗದ ಅಡಿಕೆ ತೋಟದಲ್ಲಿ, 1, 5 ಮತ್ತು 6 ನೇ ಆರೋಪಿತರು ಅಡಿಕೆ ಕೆಡುವುತ್ತಿರುವಾಗ , ಚಾಸಾ-1 ಮತ್ತು ಚಾಸಾ-4 ರವರು ಏಕೆ ತಮ್ಮ ಭಾಗದ ತೋಟದಲ್ಲಿ ಅಡಿಕೆ ಕೆಡವುತ್ತಿದ್ದೀರಾ ಎಂದು ಕೇಳಿದ್ದಕ್ಕೆ , ಆರೋಪಿತರಾದ ನೀವೆಲ್ಲರೂ ಜಗಳ ಮಾಡುವ ಸಮಾನ ಉದ್ದೇಶದಿಂದ ಚಾಸಾ-1 ಮತ್ತು ಚಾಸಾ-4 ರವರಿಗೆ ಸೂಳೇಮಕ್ಕಳಾ , ಬೋಳಿಮಕ್ಕಳಾ  ನೀವು ಯಾರಲೇ ಕೇಳುವುದಕ್ಕೆ ಇದು ಗಿರೀಶನ ಭಾಗದ ಜಮೀನು ಕಣ್ರಲೇ ಎಂದು ಅವಾಚ್ಯ ಶಬ್ದಗಳಿಂದ ಬೈದು ಸಾರ್ವಜನಿಕ ಶಾಂತತೆಗೆ ಭಂಗವನ್ನುಂಟು ಮಾಡಿರುತ್ತೀರಿ. ಆದ್ದರಿಂದ ಆರೋಪಿತರಾದ ನೀವು  ಭಾ.ದಂ.ಸಂ. ಕಲಂ 504 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತೀರೆಂದು ಆಪಾದಿಸಲಾಗಿರುತ್ತದೆ.

ಎರಡನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು  ಜಗಳ ಮಾಡುವ ಸಮಾನ ಉದ್ದೇಶದಿಂದ, ಚಾಸಾ-1 ಮತ್ತು ಚಾಸಾ-4 ರವರು  ಇದು ನಮ್ಮ ಭಾಗಕ್ಕೆ ಬಂದ ತೊಡಟ ಎಂದು ಹೇಳಿದ್ದಕ್ಕೆ 1 ನೇ ಆರೋಪಿತನಾದ ನೀನು ಕೈಯಲ್ಲಿದ್ದ ಮಚ್ಚಿನಿಂದ ಚಾಸಾ-4 ರವರ ಕಡೆಗೆ ಬೀಸಿದ್ದು , ಚಾಸಾ-4 ರವರ ಎಡಮೊಣಕಾಲಿನ ಕೆಳಗೆ ಬಿದ್ದು ರಕ್ತಗಾಯಗಳಾಗಿದ್ದು , ನಂತರ ಕೋಲಿನಿಂದ ಚಾಸಾ-4 ರವರ ಮೈ ಕೈಗೆ ಹೊಡೆದು ಸಾಮಾನ್ಯ ಸ್ವರೂಪದ ನೋವುಂಟು ಮಾಡಿರುತ್ತೀರಿ. ಆದ್ದರಿಂದ ಆರೋಪಿತರಾದ ನೀವು  ಭಾ.ದಂ.ಸಂ. ಕಲಂ 324 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತೀರೆಂದು ಆಪಾದಿಸಲಾಗಿರುತ್ತದೆ.

ಮೂರನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು  ಜಗಳ ಮಾಡುವ ಸಮಾನ ಉದ್ದೇಶದಿಂದ, ನಿಮ್ಮಲ್ಲಿಯ 5 ನೇ ಆರೋಪಿತನಾದ ನೀನು ಸಾಕ್ಷಿ-1 ರವರ ಮೈ ಕೈಗೆ ತನ್ನ ಕೈ ಕಾಲುಗಳಿಂದ ಹೊಡೆದು , ಹಲ್ಲಿನಿಂದ ಚಾಸಾ-1 ರವರ ಎಡತೋಳಿಗೆ ಕಚ್ಚಿ ಸಾಮಾನ್ಯ ಸ್ವರೂಪದ ರಕ್ತಗಾಯವನ್ನುಂಟು ಮಾಡಿರುತ್ತೀರಿ. ಆದ್ದರಿಂದ ಆರೋಪಿತರಾದ ನೀವು

ಭಾ.ದಂ.ಸಂ. ಕಲಂ 323 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತೀರೆಂದು ಆಪಾದಿಸಲಾಗಿರುತ್ತದೆ.

ಕೊನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಜಗಳ ಮಾಡುವ ಸಮಾನ ಉದ್ದೇಶದಿಂದ ನಿಮ್ಮಲ್ಲಿಯ 1 ನೇ ಆರೋಪಿತನಾದ ನೀನು ಚಾಸಾ-1 ಮತ್ತು 4 ರವರಿಗೆ ನಿಮ್ಮನ್ನು ಇಲ್ಲಿಗೆ ಬಿಡುವುದಿಲ್ಲ, ನೀವು ಈ ಜಮೀನಿನ ವಿಚಾರವಾಗಿ ಬಂದರೆ ನಿಮ್ಮನ್ನು ಸಾಯಿಸುತ್ತೇನೆಂದು ಪ್ರಾಣ ಬೆದರಿಕೆ ಹಾಕಿ ಭಯವನ್ನುಟ್ಟಿಸಿರುತ್ತೀರಿ. ಈ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ.ಕಲಂ 506 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡುತ್ತೀರೆಂದು ಆಪಾದಿಸಲಾಗಿರುತ್ತದೆ.

ನೀವು ಮೇಲ್ಕಂಡ ಅಪರಾಧಕ್ಕಾಗಿ ಈ ನ್ಯಾಯಾಲಯದ ವಿಚಾರಣೆಗೆ ಗುರಿಯಾಗಬೇಕೆಂದು ಆದೇಶಿಸುತ್ತಿದ್ದೇನೆ.

ಸಿವಿಲ್ ನ್ಯಾಯಾಧೀಶರು ಮತ್ತು

ದಿಃ **16**-07-2023 ಜೆ ಎಂ ಎಫ್ ಸಿ, ಹೊಳಲ್ಕೆರೆ.